**ದಿನಾಂಕಃ 03.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ **ವಾದಿ ಪರ** ಶ್ರೀ ಎ ಎಲ್ ಎಸ್ **ವಕೀಲರಿಂದಃ**

ಈ ದಾವೆಯನ್ನು ಎಷ್ಟು ಜನ ವಾದಿಗಳು ಸಲ್ಲಿಸಿದ್ದಾರೆ ಎಂದು ನನಗೆ ನೆನಪಿಲ್ಲ. ವಾದಿಗಳು ದಾವಾ ಅನುಸೂಚಿ ಸ್ವತ್ತುಗಳನ್ನು ಸರ್ಕಾರದವರು ಭೂ ಸ್ವಾ ಧೀನ ಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ಈ ದಾವೆಯನ್ನು ಸಲ್ಲಿಸಿದ್ದಾರೆ. ವಾದಿಗಳು ಈ ದಾವೆಯನ್ನು ಸರ್ವೆ ನಂಬರ್ 16/3 ರ 23 ಗುಂಟೆ ಜಮೀನಿಗೆ ಮತ್ತು ಸರ್ವೆ ನಂಬರ್ 10/4 ರ 23 ಗುಂಟೆ ಜಮೀನಿಗೆ ಸಲ್ಲಿಸಿರುತ್ತಾರೆ. ಸಾಕ್ಷಿದಾರರು ಮುಂದುವರೆದು, ಸರ್ವೆ ನಂಬರ್ 10/4 ರ 23 ಗುಂಟೆ ಜಮೀನನ್ನು ಈಗಾಗಲೇ ಸರ್ಕಾರದವರು ಭೂ ಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸರ್ಕಾರದವರು ಯಾವ ವರ್ಷ ಸದರಿ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದು ನನಗೆ ನೆನಪಿಲ್ಲ. ಸರ್ವೆ ನಂಬರ್ 10/4 ರ ಜಮೀನಿಗೆ ಈ ದಾವೆಯು ಸಂಬಂದಿಸದೇ ಇರುವುದರಿಂದ ನಾವು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಸದರಿ ಸರ್ವೆ ನಂಬರ್ 10/4 ರ ಜಮೀನನ್ನು ಭೂಸ್ವಾಧೀನಪಡಿಸಿಕೊಂಡ ಬಗ್ಗೆ ಸರ್ಕಾರ ಸುತ್ತೋಲೆ ಅಥವಾ ಅಧಿಸೂಚನೆ ಹೊರಡಿಸಿರುತ್ತದೆ. ಸದರಿ ಅಧಿಸೂಚನೆ ಹೊರಡಿಸಿದ ದಿನಾಂಕ ನನಗೆ ನೆನಪಿಲ್ಲ. ಸದರಿ ಜಮೀನು ಭೂಸ್ವಾಧೀನವಾದ ನಂತರ ಸದರಿ ಜಮೀನನ್ನು ಯಾವಾಗ ಭೂಸ್ವಾಧೀನ ಪಡಿಸಿಕೊಂಡರು ಎಂದು ನನಗೆ ನೆನಪಿಲ್ಲ. ಸರ್ವೆ ನಂಬರ್ 10/4 ರ ಜಮೀನಿನಲ್ಲಿ ಎಷ್ಟು ಜನ ಸಾಗುವಳಿದಾರರು ಇದ್ದರು ಎಂದು ನನಗೆ ಮಾಹಿತಿ ಇಲ್ಲ. ಸದರಿ ಸರ್ವೆ ನಂಬರ್ 10/4 ರ ಜಮೀನಿನಲ್ಲಿ ಎಷ್ಟು ಜನರಿಗೆ ಪರಿಹಾರ ನೀಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ.

ನಿಡಿ-1 ರಿಂದ 3 ರ ದಾಖಾತಿಗಳು ದಾವಾ ಎ ಅನುಸೂಚಿ ಸ್ವತ್ತಿಗೆ ಸಂಬಂದಿಸಿದ ದಾಖಲಾತಿಗಳು ಎಂದರೆ ಸರಿ. ನಿಡಿ-4 ರ ದಾಖಲಾತಿಯು ದಾವಾ ಬಿ ಅನುಸೂಚಿ ಸ್ವತ್ತಿಗೆ ಸಂಬಂದಿಸಿದ ದಾಖಲಾತಿ ಎಂದರೆ ಸರಿ. ಸರ್ವೆ ನಂಬರ್ 10/4 ರಲ್ಲಿ ಒಟ್ಟು ಜಮೀನು 1 ಎಕರೆ 39 ಗುಂಟೆ ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ 1 ಎಕರೆ 21 ಗುಂಟೆ 1976 ರಲ್ಲಿ ಭೂ ಸ್ವಾಧೀನವಾಗಿದೆ ಎಂದು ಕಲಂ ನಂಬರ್ 9 ರಲ್ಲಿ ನಮೂದಾಗಿದೆ ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲಿ ಉಳಿದ 6 ಗುಂಟೆ ಕಾವೇರಿ ನೀರಾವರಿ ನಿಗಮಕ್ಕೆ ಭೂಸ್ವಾಧೀನವಾಗಿದೆ ಎಂದು ನಿಡಿ-4 ರಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ನಿಡಿ-4 ರಲ್ಲಿ 6 ಗುಂಟೆ ಜಮೀನು 2015-16 ರಲ್ಲಿ ಭೂಸ್ವಾಧೀನವಾಗಿದೆ ಎಂದು ನಮೂದಾಗಿದೆ ಎಂದರೆ ಸರಿ. ಸದರಿ 2015-16 ರಲ್ಲಿ ಈ ದಾವೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ.

ದಾವಾ ಎ ಅನುಸೂಚಿ ಸ್ವತ್ತನ್ನು ವಾದಿಗಳ ಪೂರ್ವಿಕರು ದಿನಾಂಕ 21.03.1991 ರ ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಬಿ ಅನುಸೂಚಿ ಸ್ವತ್ತನ್ನು ವಾದಿಗಳ ಪೂರ್ವಿಕರು ದಿನಾಂಕ 24.01.1957 ರ ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರಗಳ ಆಧಾರದ ಮೇಲೆ ವಾದಿ ಮತ್ತು ವಾದಿಯ ಪೂರ್ವಿಕರ ಹೆಸರಿಗೆ ಕಂದಾಯ ದಾಖಲಾತಿಗಳು ಬದಲಾವಣೆ ಆಗಿದ್ದವು ಎಂದರೆ ನನಗೆ ಗೊತ್ತಿಲ್ಲ. ದಾವಾ ಬಿ ಅನುಸೂಚಿ ಸ್ವತ್ತನ್ನು ಯಾವ ಉದ್ದೇಶಕ್ಕಾಗಿ ಸರ್ಕಾರದವರು ಭೂಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ದಾವಾ ಬಿ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಪಡಿಸಿಕೊಂಡ ಪ್ರಕ್ರಿಯೆಗಳ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಲು ಅಗತ್ಯತೆ ಕಂಡು ಬಂದಿರುವುದಿಲ್ಲ. ನ್ಯಾಯಾಲಯ ಹಾಜರು ಪಡಿಸುವಂತೆ ಆದೇಶ ಮಾಡಿದರೆ ಹಾಜರು ಪಡಿಸಲು ಬದ್ಧವಾಗಿರುತ್ತೇವೆ. ದಾವಾ ಬಿ ಅನುಸೂಚಿ ಸ್ವತ್ತನ್ನು ನಾನು ವೈಯಕ್ತಿಕವಾಗಿ ಪರಿಶೀಲನೆ ಮಾಡಿರುವುದಿಲ್ಲ. ದಾವಾ ಎ ಅನುಸೂಚಿ ಸ್ವತ್ತನ್ನು ನಾನು ವೈಯಕ್ತಿಕವಾಗಿ ಪರಿಶೀಲನೆ ಮಾಡಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತುಗಳನ್ನು ಯಾವ ಉದ್ದೇಶಕ್ಕಾಗಿ ಭೂಸ್ವಾಧೀನ ಪಡಿಸಿಕೊಂಡಿದ್ದಾರೆ ಮತ್ತು ದಾವಾ ಅನುಸೂಚಿ ಸ್ವತ್ತುಗಳ ಪ್ರಸ್ತುತ ಸ್ಥಿತಿಯನ್ನು ವೈಯಕ್ತಿಕವಾಗಿ ಬೇಟಿ ನೀಡಿ ಪರಿಶೀಲಿಸಲು ತೊಂದರೆ ಇರುವುದಿಲ್ಲ. ಸರ್ವೆ ನಂಬರ್ 10/5 ರ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡು ಪಹಣಿ ಪತ್ರಿಕೆಗಳಲ್ಲಿ ಸರ್ವೆ ನಂಬರ್ 10/4 ನ್ನು ಭೂಸ್ವಾಧೀನ ಪಡಿಸಿಕೊಂಡಿದ್ದೇವೆ ಎಂದು ತಪ್ಪಾಗಿ ನಮೂದು ಮಾಡಿದ್ದೇವೆ ಎಂದರೆ ಸರಿಯಲ್ಲ.

ಹೊಸ ತಿರುಮಕೂಡಲು ಮತ್ತು ಕೊಳ್ಳೆಗಾಲ ರಸ್ತೆಯ ನರಸೀಪುರದಿಂದ ಹೋಗುವ ರಸ್ತೆಯ ಎಡಭಾಗದಲ್ಲಿ ಸರ್ವೆ ನಂಬರ್ 10/4 ಮತ್ತು 16/3 ರ ಜಮೀನುಗಳು ಬರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 10/4 ರಲ್ಲಿ 1 ಇಂಚು ಭೂಮಿ ಕೂಡ ಭೂಸ್ವಾಧೀನವಾಗಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 10/5 ರಲ್ಲಿ ರಸ್ತೆ ಇದೆ ಎಂದರೆ ನನಗೆ ಗೊತ್ತಿಲ್ಲ. ತಿರುಮಕೂಡಲು ಕೊಳ್ಳೆಗಾಲ ರಸ್ತೆಯ ಎಡಭಾಗದಲ್ಲಿರುವ ಅಂಗಡಿಗಳು, ಗುಡಿಸಲು ಹೋಟೆಲ್ ಗಳನ್ನು ನಾನು ಗಮನಿಸಿರುತ್ತೇನೆ. ಸದರಿ ಅಂಗಡಿಗಳು ಮತ್ತು ಗುಡಿಸಲು ಹೋಟೆಲ್ ಗಳು ಸರ್ವೆ ನಂಬರ್ 10/4 ರಲ್ಲಿ ಬರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಹಿಂದೆ ಸರ್ವೆ ನಂಬರ್ 16/3 ರ ಸಾಗುವಳಿ ಜಮೀನು ಇದೆ ಎಂದರೆ ಸರಿ. ಸದರಿ ಸರ್ವೆ ನಂಬರ್ 16/3 ರ ಜಮೀನಿನಲ್ಲಿ ವಾದಿಗಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-1 ರಿಂದ 3 ರಲ್ಲಿ ವಾದಿಗಳು ಭತ್ತ ಬೆಳೆಯುತ್ತಿದ್ದಾರೆ ಎಂದು ನಮೂದಾಗಿದೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತುಗಳು ಎಂದಿಗೂ ಭೂಸ್ವಾ ಧೀನವಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳು ಭೂಸ್ವಾ ಧೀನವಾಗದೇ ಇದ್ದರೂ ಸಹ ಪಹಣಿ ಪತ್ರಿಕೆಗಳಲ್ಲಿ ತಪ್ಪಾಗಿ ನಮೂದಿಸಿ

ಭೂಸ್ವಾಧೀನವಾಗಿದೆ ಎಂದು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಗಳು ಈ ದಾವೆಯಲ್ಲಿ ದಾವಾ ಅನುಸೂಚಿ ಸ್ವತ್ತುಗಳ ಪಹಣಿ ಪತ್ರಿಕೆಗಳನ್ನು ತಿದ್ದುಪಡಿ ಮಾಡುವಂತೆ ಕೋರಿ ಈ ದಾವೆ ಸಲ್ಲಿಸಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ದಾವಾ ಅನುಸೂಚಿ ಸ್ವತ್ತುಗಳ ಮೇಲೆ ನೊಂದಾಯಿತ ಕ್ರಯ ಪತ್ರಗಳ ಮೂಲಕ ವಾದಿಗಳಿಗೆ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 21.03.1991 ಮತ್ತು ದಿನಾಂಕ 24.01.1957 ರ ನೊಂದಾಯಿತ ಕ್ರಯ ಪತ್ರಗಳ ಮೂಲಕ ಖರೀದಿಸಿದ ಜಮೀನಿಗೆ ಸರ್ಕಾರವು ಭೂಸ್ವಾಧೀನ ಪಡಿಸಿಕೊಂಡ ಬಗ್ಗೆ ಅದರ ವಾರಸುದಾರರಿಗೆ ಯಾವುದೇ ರೀತಿಯ ಪರಿಹಾರ ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತುಗಳ ಬಗ್ಗೆ ಎಲ್ಲಾ ಮಾಹಿತಿ ತಿಳಿದಿದ್ದರೂ ಸಹ ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ